ಬೆಳ್ತಂಗಡಿ ತಾಲ್ಲೂಕಿಗೆ 110 ಕೆ.ವಿ. ವಿದ್ಯುತ್ ಸಂಪರ್ಕ ವ್ಯವಸ್ಥೆಯನ್ನು ಒದಗಿಸುವುದು.

1689(1825)

ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿಗೆ ಮಂಜೂರಾಗಿರುವ 110 ಕೆ.ವಿ ವಿದ್ಯುತ್ ಸಂಪರ್ಕ ವ್ಯವಸ್ಥೆಯ ಕಾಮಗಾರಿಗಳು ಯಾವಾಗ ಮುಗಿಯುತ್ತದೆ.

ಆ) ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ಜೋಡಿಸಲು ಗುರುತಿಸಿದ ಉಪಗ್ರಾಮಗಳೆಷ್ಟು; ಇದರಲ್ಲಿ ಪರಿಶಿಷ್ಟ ಜಾತಿ ವರ್ಗದವರ ಕಾಲೋನಿಗಳೆಷ್ಟು; ಎಷ್ಟು ವರ್ಷದೊಳಗಾಗಿ ಈ ಯೋಜನೆಯನ್ನು ಪೂರೈಸಲಾಗುವುದು.

ಇ) ತಾಲ್ಲೂಕಿನಲ್ಲಿರುವ ಲೊ-ವೋಲ್ಟೇಜ್‌ನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ತಾಲ್ಲೂಕಿನ ಕರಾಯ, ವೇಣೂರು, ಮಡಂತ್ಯಾರು ಮತ್ತು ಮುಂಡಾಜೆಗಳಲ್ಲಿ ಸಬ್-ಸ್ಟೇಷನ್ ಪ್ರಾರಂಭಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೆ, ಹಾಗಿದ್ದಲ್ಲಿ ಯೋಜನೆಯ ವಿವರಗಳೇನು.

ಶ್ರೀ ವೀರಕುಮಾರ್ ಅ.ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಬೆಳ್ತಂಗಡಿ ತಾಲ್ಲೂಕಿನ ಗುರುವಾಯನಕೆರೆ ಎಂಬಲ್ಲಿ ಒಂದು 110:33:11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ನಿರ್ಮಾಣ ಕಾರ್ಯವನ್ನು ಸಂಪೂರ್ಣ 'ಟರ್ನ್ ಕೀ' ಆಧಾರದ ಮೇಲೆ ಕೈಗೊಳ್ಳಲಾಗಿರುತ್ತದೆ. ನಿರ್ಮಾಣ ಕಾರ್ಯಗಳನ್ನು ಸೆಪ್ಟೆಂಬರ್ 2002ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಕಾರ್ಕಳ ತಾಲ್ಲೂಕಿನ ಕೇವೂರು ವಿದ್ಯುತ್ ವಿತರಣಾ ಕೇಂದ್ರದಿಂದ ಗುರುವಾಯನ ಕೆರೆಯವರೆಗೆ 46 ಕಿ.ಮೀ. ಉದ್ದದ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಬೇಕಾಗಿದ್ದು, ಈ ಕಾಮಗಾರಿಯ ನಿರ್ವಹಣೆಯನ್ನೂ ಸಹ ಸಂಪೂರ್ಣ 'ಟರ್ನ್ ಕೀ' ಆಧಾರದ ಮೇಲೆ ನಿರ್ವಹಿಸಲಾಗುತ್ತಿದೆ. ಆದರೆ ಸದರೀ ಪ್ರಸರಣ ಮಾರ್ಗದಲ್ಲಿ ಬರುವ ನಲ್ಲೂರು, ನಾರಾವಿ, ಅಳದಂಗಡಿ ಮತ್ತು ಸುತ್ತಮುತ್ತಲಿನ ಭೂ ಮಾಲೀಕರು, ಅವರುಗಳು ಜಮೀನುಗಳಲ್ಲಿ ಪ್ರಸರಣ ಮಾರ್ಗವನ್ನು ನಿರ್ಮಿಸಲು ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದರಿಂದ ಹಾಗೂ ಕೆಲವು ಭೂ ಮಾಲೀಕರು ನ್ಯಾಯಾಲಯಗಳಲ್ಲಿ

ದಾವೆ ಹೂಡಿರುವುದರಿಂದ ಈ ಕಾಮಗಾರಿಯ ಪ್ರಗತಿಯು ಕುಂಠಿತಗೊಂಡಿದೆ. ಈ ಮೇಲಿನ ಅಡಚಣೆ ಹಾಗೂ ತಡೆಯಾಜ್ಞೆಗಳ ಇತ್ಯರ್ಥಕ್ಕಾಗಿ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ. ಇವುಗಳು ನಿವಾರಣೆಗೊಳ್ಳಬೇಕಾಗಿರುವುದರಿಂದ, ಈ ಕಾಮಗಾರಿಯನ್ನು ಜುಲೈ 2002 ರ ಅಂತ್ಯದ ವೇಳಗೆ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣಗೊಳಿಸಲು ಗುರುತಿಸಲಾಗಿರುವ ಉಪಗ್ರಾಮಗಳ ಒಟ್ಟು ಸಂಖ್ಯೆ:219 ಇವುಗಳಲ್ಲಿ 35 ಪರಿಶಿಷ್ಟ ಜಾತಿ: ವರ್ಗದವರ ಕಾಲೋನಿಗಳ ವಿದ್ಯುದೀಕರಣವು ಒಳಗೊಂಡಿರುತ್ತದೆ. ಪ್ರಸಕ್ತ ಸಾಲಿನಲ್ಲಿ (2001-02) ಈ ತಾಲ್ಲೂಕಿನಲ್ಲಿ 85 ಉಪಗ್ರಾಮಗಳನ್ನು, 2 ಹರಿಜನ ಬಸ್ತಿಗಳನ್ನು ಮತ್ತು 2 ಗಿರಿಜನ ಕಾಲೋನಿಗಳನ್ನು ವಿದ್ಯುದೀಕರಿಸಲು ಗುರಿ ಹೊಂದಿದೆ. ವಿದ್ಯುದೀಕರಣಕ್ಕಾಗಿ ಬಾಕಿ ಉಳಿದಿರುವ ಉಪ ಗ್ರಾಮಗಳು, ಹರಿಜನ ಬಸ್ತಿ ಮತ್ತು ಗಿರಿಜನ ಕಾಲೋನಿಗಳನ್ನು ಮುಂದೆ ನಾಲ್ಕೈದು ವರ್ಷಗಳಲ್ಲಿ ಹಂತ ಹಂತವಾಗಿ ವಿದ್ಯುದೀಕರಿಸುವ ಗುರಿಯನ್ನು ಹೊಂದಲಾಗಿದೆ.

ಇ) ಬೆಳ್ತಂಗಡಿ ತಾಲ್ಲೂಕಿನಲ್ಲಿನ ಕಡಿಮೆ ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಧರ್ಮಸ್ಥಳದಲ್ಲಿ ಒಂದು 33:11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ನಿರ್ಮಿಸಿ ಚಾಲನೆಗೊಳಿಸಲಾಗಿದೆ.

2. ಗುರುವಾಯನ ಕೆರೆಯಲ್ಲಿ 110:33:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನನ್ನು ನಿರ್ಮಾಣ ಮಾಡಲಾಗುವುದು.

3. ಬೆಳ್ತಂಗಡಿ ವಿದ್ಯುತ್ ವಿತರಣಾ ಕೇಂದ್ರದಿಂದ ಕಲ್ಲೇರಿವರೆಗೆ 12.5 ಕೆ.ಮೀ. ಉದ್ದದ ಪ್ರತ್ಯೇಕ 11 ಕೆ.ವಿ.ಫೀಡರನ್ನು ಎಳೆಯಲಾಗಿದೆ.

4. ಈ ತಾಲ್ಲೂಕಿನಲ್ಲಿರುವ 6 ಗ್ರಾಮೀಣ ಫೀಡರ್‌ಗಳ ತಂತಿಗಳನ್ನು ಬದಲಾಯಿಸುವ ಕಾರ್ಯಕ್ಕೆ ಮಂಜೂರಾತಿಯನ್ನು ನೀಡಲಾಗಿದ್ದು, ಕೆಲಸವು ಪ್ರಗತಿಯಲ್ಲಿದೆ.

5. ವಿವಿಧ ಕಾರ್ಯಕ್ರಮಗಳಡಿಯಲ್ಲಿ 36 ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗಿದೆ ಹಾಗೂ 63 ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಮಂಜೂರಾತಿಯನ್ನು ನೀಡಲಾಗಿದೆ.

ಈ) ಬೆಳ್ತಂಗಡಿ ತಾಲ್ಲೂಕಿನ ಕರಾಯ, ವೇಣೂರು, ಮಡಂತ್ಯಾರು ಮತ್ತು

ಮುಂಡಾಜೆಗಳಲ್ಲಿ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಬೆಳ್ತಂಗಡಿ ಪೋಲೀಸ್ ಠಾಣೆಗೆ ಮಂಜೂರಾದ ಹುದ್ದೆಗಳು.

1691(1827)

ಶ್ರೀ ಪ್ರಭಾಕರ ಬಂಗೇರ .ಕೆ(ಬೆಳ್ತಂಗಡಿ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಆದೇಶದಂತೆ ಬೆಳ್ತಂಗಡಿ ಪೋಲೀಸ್ ಠಾಣೆಗೆ ಮಂಜೂರಾದ ಹುದ್ದೆಗಳು ಎಷ್ಟು; ಮತ್ತು ಖಾಲಿ ಇರುವ ಹುದ್ದೆಗಳೆಷ್ಟು?

ಆ) ತಾಲ್ಲೂಕಿನಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಅವಶ್ಯವಿರುವ ಸರ್ಕಾರಿ ವಸತಿ ವ್ಯವಸ್ಥೆಯನ್ನು ಮಾಡಲಾಗಿದೆಯೇ; ಹಾಗಿಲ್ಲದಿದ್ದಲ್ಲಿ ಕೊರತೆ ಇರುವ ವ್ಯವಸ್ಥೆಯನ್ನು ಯಾವಾಗ ನಿರ್ಮಿಸಲಾಗುವುದು;

ಇ) ಧರ್ಮಸ್ಥಳ ಮತ್ತು ಪುಂಜಾಲಕಟ್ಟೆಗಳಲ್ಲಿನ ಹೊರ ಠಾಣೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು? ವೇಣೂರು ಪೊಲೀಸ್ ಠಾಣೆಗೆ ಅವಶ್ಯವಿರುವ ಜೀಪನ್ನು ಸರ್ಕಾರ ಯಾವಾಗ ಒದಗಿಸಲಾಗುವುದು?

ಈ) ತಾಲ್ಲೂಕಿನಲ್ಲಿರುವ ಪೋಲೀಸ್ ಠಾಣೆಗಳಲ್ಲಿ ಕೊರತೆ ಇರುವ ಸಿಬ್ಬಂದಿ ವರ್ಗಗಳೆಷ್ಟು ಅವರುಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಉ) ಬೆಳ್ತಂಗಡಿ ಪೋಲೀಸ್ ಠಾಣೆಗೆ ಕೈಮ್ ಉಪ ನಿರೀಕ್ಷಕರ ಹುದ್ದೆಯು ಮಂಜೂರಾಗಿದೆಯೆ; ಹಾಗಿದ್ದಲ್ಲಿ ಯಾವಾಗ ಈ ಹುದ್ದೆಯನ್ನು ಭರ್ತಿ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಬೆಳ್ತಂಗಡಿ ಪೋಲೀಸ್ ಠಾಣೆಗೆ ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿವೆ (ಇದರಲ್ಲಿ ಧರ್ಮಸ್ಥಳ ಮತ್ತು ಪುಂಜಾಲಕಟ್ಟೆ ಹೊರ ಠಾಣೆಗಳು ಸೇರಿವೆ)